ದಿನಾಂಕಃ -04-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ ಆರ್ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ ಅದರಲ್ಲಿ ಹೇಳಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ ಮತ್ತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| | |
|---|---|
| ನಿಪಿ-1 | ಅರ್ಜಿದಾರರ ಆಧಾರ್ ಕಾರ್ಡ್ ನ ದೃಡೀಕೃತ ನಕಲು , ಮೂಲ ದಾಖಲೆಯೊಂದಿಗೆ ನಕಲನ್ನು ಪರಿಶೀಲಿಸಿ ಹಿಂದಿರುಗಿಸಲಾಯಿತು. |
| ನಿಪಿ-2 | ಸರ್ವೇ ನಂ.323/2B ಚೌಡಪ್ಪ ಬಿನ್ ರಂಗಪ್ಪ ( ಅರ್ಜಿದಾರರ ಚಿಕ್ಕಪ್ಪ ) |
| ನಿಪಿ-3 | ಅರ್ಜಿದಾರರ ಕೆನರಾ ಬ್ಯಾಂಕ್ ಪಾಸ್ ಬುಕ್ಕಿನ ದೃಡಿಕೃತ ನಕಲು ( ಮೂಲ ದಾಖಲೆಯನ್ನು ಪರಿಶೀಲಿಸಿ ಹಿಂದಿರುಗಿಸಲಾಯಿತು ) |

ಅರ್ಜಿಯನ್ನು ಪುರಸ್ಕರಿಸಬೇಕೆಂದು ನ್ಯಾಯಾಲಯಕ್ಕೆ ಪ್ರಾರ್ಥಿಸುತ್ತೇನೆ.

ಪಾಟೀ ಸವಾಲು ಎದುರುದಾರರ ಪರ ಶ್ರೀ ಎಸ್ ಆರ್ ವಕೀಲರಿಂದಃ-

ನನಗೆ ಓದಲು, ಬರೆಯಲು ಬರುವುದಿಲ್ಲ. ನನ್ನ ಜಮೀನಿನ ಸರ್ವೇ ನಂ.323/2B. ಸದರಿ ಆರ್ ಟಿ ಸಿ ಯಲ್ಲಿ ಇರುವ ಜಮೀನು ಚೌಡಪ್ಪ ರವರ ಹೆಸರಿನಲ್ಲಿದೆ ಅಂದರೆ ಸರಿ. ಆರ್ ಟಿ ಸಿ ಯಲ್ಲಿ ತಮ್ಮ ಹೆಸರು ಇಲ್ಲದ ಕಾರಣ ತಮಗೂ ಮತ್ತು ಈ ಕೇಸಿಗೂ ಸಂಬಂದವಿಲ್ಲ ಅಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಸದರಿ ಜಮೀನು ಸರ್ವೇ ನಂ.323/2B ಭಾಗವಾಗಿರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ . ಸದರಿ ಕಾರಣಕ್ಕಾಗಿ ತಾವು ಹೆಚ್ಚಿನ ಪರಿಹಾರದ ಹಣವನ್ನು ಪಡೆಯಲು ಅರ್ಹರಲ್ಲ ಅಂದರೆ ಸರಿಯಲ್ಲ . ಸರ್ವೇ ನಂ. 323/2B ಜಮೀನು ಚೌಡಪ್ಪ ರವರ ಹೆಸರಿನಲ್ಲಿರುವುದರಿಂದ ನಾನು ಈ ಅರ್ಜಿಯನ್ನು ಸಲ್ಲಿಸಲು ಅರ್ಹರಲ್ಲ ಅಂದರೆ

ಸರಿಯಲ್ಲ. ಎದುರುದಾರ ಸಂಸ್ಥೆಯವರು ಲೈನ್ ಎಳೆದಿರುವ ಬಗ್ಗೆ ನನಗೆ ಒಪ್ಪಿಗೆ ಇರಲಿಲ್ಲ .ನಮ್ಮ ಜಮೀನಿನಲ್ಲಿ 4 ಹೊಂಗೆ ಮರ, 3 ಜಾಲಿ ಮರ, 4 ಬೇವಿನ ಮರಗಳಿದ್ದವು. ಲೈನ್ ಎಳೆಯುವಾಗ ಕಡಲೆಗಿಡ, ಹುರುಳಿಗಿಡ , ತೊಗರಿಗಿಡ ಇದ್ದವು. ಆರ್ ಟಿ ಸಿ ಯಲ್ಲಿ ಕಡಲೆಗಿಡವನ್ನು ಬಿಟ್ಟು ಬೇರೆ ಯಾವುದೇ ನಮೂದು ಇಲ್ಲದ ಕಾರಣ ಅಲ್ಲಿ ಬೇರೆ ಯಾವುದೇ ಬೆಳೆಗಳು ಇರುವುದಿಲ್ಲ ಅಂದರೆ ಸರಿಯಲ್ಲ . ತೊಗರಿಬೇಳೆಯಿಂದ ನಷ್ಟವಾಗಿರುವ ಬಗ್ಗೆ ನ್ಯಾಯಾಲಯದ ಮುಂದೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ . ಮರಗಳಿಂದ ಇಂತಿಷ್ಟು ಆದಾಯ ಬರುತ್ತದೆಯೆಂದು ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಯಾವುದೇ ದ ಾಖಲಾತಿ ಹಾಜರುಪಡಿಸಿರುವುದಿಲ್ಲ. ಆ ಕಾರಣಕ್ಕಾಗಿ ಯಾವುದೇ ಪರಿಹಾರಗಳನ್ನು ಪಡೆಯಲು ಅರ್ಹರಲ್ಲ ಅಂದರೆ ಸರಿಯಲ್ಲ . ಪ್ರತಿವಾದಿಯವರು ಜಿಲ್ಲಾಧಿಕಾರಿಯವರ ಆದೇಶದ ಮೇರೆಗೆ ನ್ಯಾಯ ಸಮ್ಮತವಾದ ಪರಿಹಾರ ಕೊಟ್ಟಿದ್ದರೂ ಸಹ ಸುಳ್ಳು ಅರ್ಜಿಯನ್ನು ಹಾಕಿದ್ದೀರಿ ಅಂದರೆ ಸರಿಯಲ್ಲ . ಅರ್ಜಿ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರು ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ .

– ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

6 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.